ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 14–8–2017

# ಪತ್ರಿಕಾ ಆಮಂತ್ರಣ

**1. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆ:**

**ಧ್ವಜಾರೋಹಣ:**

**ಮಾನ್ಯ ಶ್ರೀ ಮುಖ್ಯ ನ್ಯಾಯಮೂರ್ತಿ, ಸುಬ್ರೋ ಕಮಲ್ ಮುಖರ್ಜಿ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
ದಿನಾಂಕ: 15–8–2017 ಮಂಗಳವಾರ ಸಮಯ: ಬೆಳಿಗ್ಗೆ : 9–30 ಗಂಟೆಗೆ
ಸ್ಥಳ: ಸೆಂಟ್ರಲ್ ಪೋರ್ಟಿಕೊ, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು**

**2. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ವಿ.ಪಿ. ದೀನದಯಾಳು ನಾಯ್ಡು ಜನ್ಮಶತಮಾನೋತ್ಸವ ಸಮಾರಂಭ:**

ಅಧ್ಯಕ್ಷತೆ:

ಆರ್. ರೋಷನ್‌ಬೇಗ್,
ಮಾನ್ಯ ನಗರಾಭಿವೃದ್ಧಿ ಸಚಿವರು

ಮುಖ್ಯ ಅತಿಥಿ:
ಶ್ರೀ ಯು.ಟಿ. ಖಾದರ್,
ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ದಿನಾಂಕ: 16–8–2017, ಬುಧವಾರ, ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ , ಕರ್ನಾಟಕ
39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು

# ಪತ್ರಿಕಾ ಪ್ರಕಟಣೆ

# ಮಹದಾಯಿ ನದಿ ನೀರು ಸಮಸ್ಯೆ ಕುರಿತಂತೆ ಗೋವಾ ರಾಜ್ಯ ಸರ್ಕಾರದ ಜೊತೆ ಮಾತುಕತೆಗೆ ಸಿದ್ದ – ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)

ಒಂದು ರಾಜ್ಯದ ಚುನಾಯಿತ ಸರ್ಕಾರ ಮತ್ತೊಂದು ರಾಜ್ಯದ ಚುನಾಯಿತ ಸರ್ಕಾರದ ಜೊತೆ ಎರಡೂ ರಾಜ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾತನಾಡಿ ಸಮಸ್ಯೆ ಬಗೆಹರಿಸಿಕೊಳ್ಳುವುದು ಸೂಕ್ತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಿಧಾನ ಸೌಧ ಸಮ್ಮೇಳನ ಸಭಾಂಗಣದಲ್ಲಿ ಇಂದು ಏರ್ಪಡಿಸಲಾಗಿದ್ದ ಕಳಸಾಬಂಡೂರಿ ಯೋಜನೆ, ಮಹದಾಯಿ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ ಹಂಚಿಕೆ ಕುರಿತಂತೆ ಸರ್ವ ಪಕ್ಷಗಳ ಮುಖಂಡದ ಸಭೆಯಲ್ಲಿ ಮುಖ್ಯಮಂತ್ರಿ ಅವರು ಮಾತನಾಡಿ ವಿರೋಧ ಪಕ್ಷದ ಮುಖಂಡರು ಪ್ರಸ್ತಾಪಿಸಿದಂತೆ ಮಹದಾಯಿ ನದಿ ನೀರಿನ ಸಮಸ್ಯೆ ಕುರಿತಂತೆ ಗೋವಾದ ವಿರೋಧ ಪಕ್ಷದ ಮುಖಂಡರ ಜೊತೆ ಮಾತನಾಡುತ್ತೇನೆ ಎಂದರು.

ನಾನು ಇತ್ತೀಚೆಗೆ ಹುಬ್ಬಳ್ಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಹದಾಯಿ ಹೋರಾಟ ಪ್ರಾರಂಭವಾಗಿ ಎರಡು ವರ್ಷ ಕಳೆದಿದೆ ಮತ್ತೊಮ್ಮೆ ಸರ್ವ ಪಕ್ಷಗಳ ಮುಖಂಡರ ಸಭೆ ಕರೆದು ಒಂದು ತೀರ್ಮಾನಕ್ಕೆ ಬನ್ನಿ ಎಂದು ಧರಣಿ ನಿರತ ರೈತರು ಮನವಿ ಮಾಡಿದ್ದರು ಈ ಹಿನ್ನೆಲೆಯಲ್ಲಿ ಇಂದು ಸಭೆ ಕರೆಯಲಾಗಿದೆ. ಮಹದಾಯಿ ನದಿ ನೀರಿನ ಸಮಸ್ಯೆ ಕುರಿತಂತೆ ನ್ಯಾಯಮಂಡಳಿಯಲ್ಲಿ ವಿಚಾರಣೆ ತ್ವರಿತಗತಿಯಲ್ಲಿ ನಡೆಯುತ್ತಿದೆ ಮುಂದಿನ ಆದೇಶದ ಬಗ್ಗೆ ರೈತರು ಆತಂಕದಲ್ಲಿದ್ದಾರೆ ಹೀಗಾಗಿ ಈ ಸಮಸ್ಯೆಗೆ ಸೂಕ್ತ ಪರಿಹಾರ ಕೈಗೊಳ್ಳಬೇಕಾಗಿದೆ. ಮಾತುಕತೆಯ ಮೂಲಕ ವಿವಾದ ಬಗೆಹರಿಸಿಕೊಳ್ಳುವಂತೆ ನ್ಯಾಯಮಂಡಳಿ ಸಲಹೆ ನೀಡಿದ ಬಳಿಕ ನಾನು ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸಭೆಯನ್ನು ಕರ್ನಾಟಕ ರಾಜ್ಯವೇ ಆಯೋಜಿಸುತ್ತದೆ ತಾವು ಸಭೆಯಲ್ಲಿ ಪಾಲ್ಗೊಳ್ಳಬೇಕು ಎಂದು ಆಹ್ವಾನಿಸಲಾಯಿತು. ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳು ಒಪ್ಪಿದರು ಆದರೆ ಗೋವಾ ರಾಜ್ಯದ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಲು ಇಲ್ಲ ಪ್ರತ್ಯುತ್ತರವನ್ನು ಕಳುಹಿಸಲಿಲ್ಲ ಎಂದು ಮುಖ್ಯಮಂತ್ರಿಗಳು ಸಭೆಗೆ ಮಾಹಿತಿ ನೀಡಿದರು.

ಗೋವಾ ರಾಜ್ಯದ ಮುಖ್ಯಮಂತ್ರಿ ಅವರಿಂದ ಉತ್ತರ ಬಾರದಿದ್ದಾಗ ದೂರವಾಣಿ ಮೂಲಕ ಮಾತಾಡೋಣ ಎಂದು ಕರೆ ಮಾಡಿದರು ಕರೆ ಸ್ವೀಕರಿಸಿರಲಿಲ್ಲ, ಇತ್ತೀಚೆಗೆ ಗೋವಾ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿ ಅವರಿಗೆ

ಪತ್ರ ಬರೆದು ಗೋವಾದಲ್ಲಿ ಉಪ ಚುನಾವಣೆ ನಡೆಯುತ್ತಿದ್ದು ಚುನಾವಣೆ ಮುಗಿದ ಬಳಿಕ ಈ ವಿಚಾರವಾಗಿ ಚರ್ಚಿಸುವುದಾಗಿ ತಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಅವರು ತಿಳಿಸಿದರು.

ಮಹದಾಯಿ ನದಿ ನೀರಿನ ವಿಷಯಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷವಾದ ಬಿ.ಜೆ.ಪಿ. ಪಕ್ಷದ ಮುಖಂಡರು ಉಪ ಚುನಾವಣೆ ಬಳಿಕ ಗೋವಾಗೆ ತೆರಳಿ ಅಲ್ಲಿನ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಸಮಸ್ಯೆ ಬಗೆ ಹರಿಸುವುದಾಗಿ ಸಭೆಯಲ್ಲಿ ತಿಳಿಸಿದ್ದಾರೆ. ನಂತರ ನಾನು ಆ ರಾಜ್ಯದ ವಿರೋಧ ಪಕ್ಷದವರ ಹತ್ತಿರ ಮಾತನಾಡುತ್ತೇನೆ ಎಂದು ಮುಖ್ಯಮಂತ್ರಿ ಅವರು ತಿಳಿಸಿದರು.

ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವರಾದ ಸದಾನಂದಗೌಡ ಅವರು ಮಾಜಿ ಮುಖ್ಯ ಮಂತ್ರಿ ಯಡಿಯೂರಪ್ಪ ನೇತೃತ್ವದಲ್ಲಿ ರಾಜ್ಯದಲ್ಲಿನ ವಿರೋಧಪಕ್ಷದ ನಾಯಕರು ಮಾನ್ಯ ಲೋಕ ಸಭಾ ಸದಸ್ಯರು, ಆ ಭಾಗದ ಚುನಾಯಿತ ಜನಪ್ರತಿನಿಧಿಗಳು ಗೋವಾ ರಾಜ್ಯದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ರಾಜ್ಯ ಸರ್ಕಾರದ ಆ ರಾಜ್ಯದ ವಿರೋಧಪಕ್ಷದವರ ಮನ ಒಲಿಸಲಿ ಎಂದು ಮಾತನಾಡಿದರು.

ಒಕ್ಕೂಟದ ವ್ಯವಸ್ಥೆಯ ದೇಶ ನಮ್ಮದು ಎಂದು ಎಸ್.ಆರ್. ಪಾಟೀಲ್ ಅವರ ವಾದವನ್ನು ನಾನು ಒಪ್ಪುತ್ತೇನೆ. ಹಿಂದಿನ ಕೇಂದ್ರ ಸರ್ಕಾರಗಳು ಈ ಸಮಸ್ಯೆಗೆ ಸರಿಯಾಗಿ ಸ್ಪಂದಿಸದಿರುವುದೇ ಇಂದಿನ ಸಮಸ್ಯೆಗೆ ಕಾರಣ ಎಂದು ಮಾತನಾಡಿದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಕೆ.ಎಸ್. ಈಶ್ವರಪ್ಪ ಅವರು ಮಹದಾಯಿ ನದಿ ನೀರು ಬಿಡಿಸಲು ಗೋವಾ ಸರ್ಕಾರದ ಮುಖ್ಯಮಂತ್ರಿ ಅವರನ್ನು ನಾವು ಒಪ್ಪಿಸುತ್ತೇವೆ. ರಾಜ್ಯ ಸರ್ಕಾರ ವಿರೋಧ ಪಕ್ಷದವರು ಇದಕ್ಕೆ ಆಕ್ಷೇಪ ತೆಗೆಯದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾನೂನು ಹೋರಾಟದ ಜೊತೆಗೆ ಮಾತುಕತೆ ಮೂಲಕವೂ ಮಹದಾಯಿ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗಿದೆ ಎಂದು ಮಾತನಾಡಿದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಅವರು ಈಗಾಗಲೆ ಈ ಸಮಸ್ಯೆ ಬಗ್ಗೆ ಗೋವಾ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಅವರ ಜೊತೆ ಚರ್ಚಿಸಲಾಗಿದೆ ಆ ರಾಜ್ಯದಲ್ಲಿ ಉಪ ಚುನಾವಣೆ ಇದೆ ಚುನಾವಣೆ ಮುಗಿದ ತಕ್ಷಣ ನಾವು ಗೋವಾಗೆ ಭೇಟಿ ನೀಡಿ ಆ ರಾಜ್ಯದ ಮುಖ್ಯಮಂತ್ರಿ ಅವರ ಜೊತೆ ಚರ್ಚಿಸಿ ಸಮಸ್ಯೆ ಬಗೆಹರಿಸುತ್ತೇವೆ ಎಂಬ ನಂಬಿಕೆ ಇದೆ ಎಂದರು.

ರಾಜ್ಯದ ಹಿತಕ್ಕೆ ದಕ್ಕೆ ಆಗದ ಹಾಗೆ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಚರ್ಚಿಸಿ ಮಹದಾಯಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಜೆ.ಡಿ.ಎಸ್. ಮುಖಂಡರು ಹಾಗೂ ಶಾಸಕರು ಆದ ಹೆಚ್.ಡಿ. ರೇವಣ್ಣ ಅವರು ಹೇಳಿದರು.

ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರು ನ್ಯಾಯಮಂಡಳಿಯಿಂದ ಹೊರಗಡೆಯೇ ಮಹದಾಯಿ ನೀರಿನ ವಿಚಾರವನ್ನು ಬಗೆಹರಿಸಿಕೊಳ್ಳಬೇಕು ಎಂದು ಒಮ್ಮತದ ತೀರ್ಮಾನಕ್ಕೆ ಬರಲಾಯಿತು.

ರಾಜ್ಯ ನೀರಾವರಿ ಸಚಿವರಾದ ಎಂ.ಬಿ. ಪಾಟೀಲ್ ಅವರು ಹಾಗೂ ಕಾನೂನು ತಜ್ಞರು ನ್ಯಾಯಮಂಡಳಿಯಲ್ಲಿ ಮಹದಾಯಿ ನದಿ ನೀರಿನ ವಿಚಾರಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯನ್ನು ನೀಡಿದರು.

ಸಚಿವರಾದ ಹೆಚ್.ಕೆ. ಪಾಟೀಲ್, ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಲೋಕಸಭಾ ಸದಸ್ಯರಾದ ವೀರಪ್ಪ ಮೊಯಿಲಿ, ಶಾಸಕರುಗಳಾದ ಕೋನರೆಡ್ಡಿ, ಪುಟ್ಟಣ್ಣಯ್ಯ ಲೋಕಸಭಾ ಸದಸ್ಯರಾದ ಗದ್ದಿಗೌಡರ್, ಪ್ರಹ್ಲಾದ ಜೋಶಿ, ಪ್ರಕಾಶ್ ಹುಕ್ಕೇರಿ, ವಿಧಾನ ಪರಿಷತ್ ಸದಸ್ಯರಾದ ಎಸ್.ಆರ್. ಪಾಟೀಲ್ ಸಭೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಕೇಂದ್ರ ಸಚಿವರಾದ ರಮೇಶ್ ಜಿಗಜಿಣಗಿ, ಸಚಿವರುಗಳಾದ ಟಿ.ಬಿ. ಜಯದಂದ್ರ, ರಮೇಶ್ ಜಾರಕಿಹೊಳಿ, ಕೃಷ್ಣಬೈರೇಗೌಡ, ವಿನಯಕುಲಕರ್ಣಿ, ಉಮಾಶ್ರೀ, ರುದ್ರಪ್ಪ ಮಾನಪ್ಪ ಲಮಾಣಿ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ರೈತ ಮುಖಂಡರುಗಳು, ಅಧಿಕಾರಿಗಳು ನೀರಾವರಿ ತಜ್ಞರು ಲೋಕಸಭಾ ಸದಸ್ಯರು, ಶಾಸಕರು, ರಾಜ್ಯಸಭಾ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

**53/53**

## ಕಾವೇರಿ ನದಿ ಪ್ರಾಂತ್ಯದ ರೈತರು ಮಳೆ ಆಧಾರಿತ ಬೆಳೆ ಬೆಳೆಯುವಂತೆ ಮನವಿ – ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)

ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಈ ಭಾರಿಯೂ ಮಳೆಯ ಕೊರತೆ ಉಂಟಾಗಿದ್ದು ಹಾಲಿ ಜಲಾಶಯಗಳಲ್ಲಿರುವ ನೀರನ್ನು ಕುಡಿಯುವ ನೀರಿಗಾಗಿ ಬಳಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಏರ್ಪಡಿಸಲಾಗಿದ್ದ ಕಾವೇರಿ ನೀರಿನ ವಿಷಯ ಕುರಿತಂತೆ ಕರೆಯಲಾಗಿದ್ದ ಉಭಯ ಸದನಗಳ ಸದಸ್ಯರು, ವಿರೋಧ ಪಕ್ಷದ ಮುಖಂಡರು, ಆ ಭಾಗದ ಸಂಸತ್ ಸದಸ್ಯರು, ಶಾಸಕರು ಹಾಗೂ ಕೇಂದ್ರ ಸಚಿವರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮುಖ್ಯಮಂತ್ರಿ ಅವರು ಇದೇ ತಿಂಗಳ 9 ರಂದು ಮಂಡ್ಯ ಭಾಗದ ಮುಖಂಡರ ಸಭೆ ಕರೆಯಲಾಗಿತ್ತು, ಆ ಸಭೆಯಲ್ಲಿ ಈಗಿರುವ ನೀರಿನಲ್ಲಿ ಜನ

ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಹಾಲಿ ಬೆಳೆದಿರುವ ಕಬ್ಬಿನ ಬೆಳೆಗೆ ನೀರು ಬಿಡುವಂತೆ ಸಭೆಯಲ್ಲಿ ಕೋರಿದ್ದರಿಂದ ಕ್ರಮಕೈಗೊಳ್ಳುವುದಾಗಿ ತಿಳಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಯಿತು ಎಂದು ಮುಖ್ಯಮಂತ್ರಿ ಅವರು ಸಭೆಗೆ ತಿಳಿಸಿದರು.

ಮಂಡ್ಯ ಭಾಗದ ರೈತರು ಮಳೆ ಆಧಾರಿತ ಬೆಳೆ ಬೆಳೆಯುವಂತೆ ಮನವಿ ಮಾಡಲಾಗಿದೆ ಎಂದ ಮುಖ್ಯಮಂತ್ರಿ ಅವರು ಆ ಭಾಗದ ಕೆರೆ ತುಂಬಿಸುವ ಕೆಲಸವನ್ನು ಮಾಡಲಾಗುವುದು ಎಂದರು.

ಕಾನೂನು ತಜ್ಞರಾದ ಬ್ರಿಜೇಶ್ ಕಾಳಪ್ಪ ಅವರು ಕಾವೇರಿ ವಿಚಾರಕ್ಕೆ ಸಂಬಂಧಿಸಿದಂತೆ ಸಭೆಗೆ ಮಾಹಿತಿ ನೀಡಿದರು.

ಜೂನ್ ಹಾಗೂ ಜುಲೈ ಎರಡು ತಿಂಗಳಲ್ಲಿ ತಮಿಳುನಾಡಿಗೆ ಒಟ್ಟು 44 ಟಿ.ಎಂ.ಸಿ. ನೀರು ಬಿಡಬೇಕಾಗಿತ್ತು. ಆದರೆ ನಮ್ಮ ಜಲಾಶಯಗಳಲ್ಲಿ ನೀರಿಲ್ಲ ಹಾಗಾಗಿ ತಮಿಳುನಾಡಿಗೆ ನೀರು ಬಿಡಲಾಗಿಲ್ಲ ಎಂದು ನೀರಾವರಿ ಸಚಿವ ಎಂ.ಬಿ. ಪಾಟೀಲ್ ಅವರು ಸಭೆಗೆ ತಿಳಿಸಿದರು.

ಕಾವೇರಿ ಭಾಗದ ಕೆರೆಗಳನ್ನು ತುಂಬಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಶಾಸಕರಾದ ಸಾ.ರಾ. ಮಹೇಶ್ ಸಲಹೆ ನೀಡಿದರು.

ಮಾನ್ಯ ಮುಖ್ಯಮಂತ್ರಿ ಅವರು 9 ರಂದು ನಡೆಸಿದ ಸಭೆಯಲ್ಲಿ ನೀವು ನೀಡಿದ ಸಲಹೆ ಸೂಚನೆಗಳನ್ನು ಅಧಿಕಾರಿಗಳು ಸರಿಯಾಗಿ ಪಾಲಿಸಿಲ್ಲ ಮತ್ತೊಮ್ಮೆ ಪರಿಶೀಲಿಸಿ ಎಂದು ಕೇಂದ್ರ ಸಚಿವ ಸದಾನಂದಗೌಡ ಅವರು ಸಭೆಗೆ ತಿಳಿಸಿದರು.

ವಿರೋಧ ಪಕ್ಷದ ನಾಯಕರುಗಳಾದ ಜಗದೀಶ್ ಶೆಟ್ಟರ್, ಕೆ.ಎಸ್.ಈಶ್ವರಪ್ಪ, ಶಾಸಕರಾದ ಹೆಚ್.ಡಿ. ರೇವಣ್ಣ, ಚೆಲುವರಾಯಸ್ವಾಮಿ, ಸಚಿವರುಗಳಾದ ಹೆಚ್. ಮಹದೇವಪ್ಪ, ಡಿ.ಕೆ. ಶಿವಕುಮಾರ್, ಲೋಕಸಭಾ ಸದಸ್ಯರು, ಶಾಸಕರು ಭಾಗವಹಿಸಿ ಮಾತನಾಡಿದರು.

ಸಚಿವರುಗಳಾದ ಎ. ಮಂಜು, ಕೃಷ್ಣಬೈರೇಗೌಡ, ಸೀತಾರಾಂ, ಕೆ.ಜೆ. ಜಾರ್ಜ್, ಯು.ಟಿ. ಖಾದರ್, ಎಂ. ಕೃಷ್ಣಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಠಿಆ ಸೇರಿದಂತೆ ಅಧಿಕಾರಿಗಳು, ನೀರಾವರಿ ತಜ್ಞರು ಪಾಲ್ಗೊಂಡಿದ್ದರು.

54/54

## ಮೋಡ ಬಿತ್ತನೆ ವಿಮಾನ ಪರಿವೀಕ್ಷಣೆ ಮಾಡಿದ ಸಚಿವ ಎಚ್ ಕೆ ಪಾಟೀಲ.

ಬೆಂಗಳೂರು-14: ಮೋಡ ಬಿತ್ತನೆಗಾಗಿ ಅಮೇರಿಕಾದಿಂದ ವಿಶೇಷವಾಗಿ ತರಿಸಿಕೊಳ್ಳಲಾಗಿರುವ ಮೋಡ ಬಿತ್ತನೆಯ ತಂತ್ರಜ್ಞಾನ ಹೊಂದಿರುವ ವಿಮಾನವು ಬೆಂಗಳೂರಿನ ಜಕ್ಕೂರು ಖಾಸಗಿ ನಿಲ್ದಾಣದಲ್ಲಿ ಬಂದಿಳಿದಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವ ಎಚ್ ಕೆ ಪಾಟೀಲರು ಇಂದು ಮದ್ಯಾಹ್ನ ಪರಿಶೀಲನೆ ನಡೆಸಿದರು.

ಮೋಡ ಬಿತ್ತನೆಯ ಕಾರ್ಯಕ್ರಮವು ಆಗಸ್ಟ್-18 ರಿಂದ ಪ್ರಾರಂಭವಾಗುವ ತಾತ್ಕಾಲಿಕ ನಿರೀಕ್ಷೆಯ ಹಿನ್ನೆಲೆಯಲ್ಲಿ ಈ ಕುರಿತು ನಡೆದಿರುವ ಎಲ್ಲಾ ಸಿದ್ದತೆಗಳನ್ನು ಮಾನ್ಯ ಸಚಿವರು ಜಕ್ಕೂರು ಖಾಸಗಿ ನಿಲ್ದಾಣದಲ್ಲಿ ಇಂದು ಪರಿಶೀಲಿಸಿದರು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗುವ ರಾಡಾರ್ ಮೂಲಕ ಸಂಕೇತಗಳನ್ನು ಪಡೆದು ಆ ಸಂಕೇತಗಳ ಹಿನ್ನೆಲೆಯಲ್ಲಿ ಬಿತ್ತನೆಯ ಅವಕಾಶ ಹೊಂದಿರುವ ಮೋಡಗಳ ಮೇಲೆ ಮೋಡ ಬಿತ್ತನೆ ಮಾಡಲು ತನ್ಮೂಲಕ ಮಳೆಯ ಪ್ರಮಾಣವನ್ನು ವೃದ್ದಿಸಲು ಮೋಡ ಬಿತ್ತನೆಯಂತಹ ವೈಜ್ಞಾನಿಕ ಕ್ರಮಕ್ಕೆ ಸಕರ್ಾರ ಮುಂದಾಗಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ.

ಆಗಸ್ಟ್-18 ರಂದು ಮೋಡ ಬಿತ್ತನೆಯ ಕಾರ್ಯಕ್ರಮ ಪ್ರಾರಂಭವಾಗುವ ನಿರೀಕ್ಷೆಗಳಿದ್ದು ಮೋಡ ಬಿತ್ತನೆಯ ತಾಂತ್ರಿಕ ಸಿದ್ದತೆಗಳು ಭರದಿಂದ ನಡೆಯುತ್ತಿವೆ. ಈ ಎಲ್ಲಾ ಸಿದ್ದತೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಪ್ರಧಾನ ಕಾರ್ಯದಶರ್ಿ ಡಾ. ಶ್ರೀಮತಿ ನಾಗಾಂಬಿಕಾದೇವಿ, ಹೆಚ್ ಪಿ ಪ್ರಕಾಶ, ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ಪ್ರಕಾಶಕುಮಾರ, ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಇತರ ಹಿರಿಯ ಅಧಿಕಾರಿಗಳು ಹಾಗೂ ಅಮೇರಿಕಾದಿಂದ ಮೋಡ ಬಿತ್ತನೆಯ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿರುವ ತಂತ್ರಜ್ಞರೊಂದಿಗೆ ಸಚಿವರು ಸಮಾಲೋಚನೆ ನಡೆಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಈ ಕಾರ್ಯಕ್ರಮವನ್ನು ಸುಮಾರು 35.00 ಕೋಟಿ ರೂಪಾಯಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಆಗಸ್ಟ್-18 ರಿಂದ ಪ್ರಾರಂಭವಾಗುವ ಕಾರ್ಯಕ್ರಮ ಮಳೆಯ ಅಗತ್ಯವಿರುವ ಮತ್ತು ಮಳೆಯ ಸಾಧ್ಯತೆ ಹೊಂದಿರುವ ಲಭ್ಯತೆಯನ್ನು ಆಧರಿಸಿ ದೈನಂದಿನ ರಾಡಾರ್ ಚಿತ್ರಗಳ ಮತ್ತು ಸಂಕೇತಗಳ ಆಧಾರದ ಮೇಲೆ ಮೋಡ ಬಿತ್ತನೆ ಕೈಗೊಳ್ಳಲಾಗುತ್ತದೆ.

ಮೋಡ ಬಿತ್ತನೆ :

1. ಮೋಡಗಳಲ್ಲಿ ತೇವಾಂಶವಿದ್ದಾಗಲೂ ಮಳೆಬಾರದ ಸ್ಥಿತಿ ಉಂಟಾದಾಗ ಮತ್ತು ಮೋಡಗಳು ಸಾಮಥ್ರ್ಯ ಕಳೆದುಕೊಂಡು ಚದುರಿ ಹೋಗುವುದನ್ನು ತಡೆದು ತೇವಾಂಶವನ್ನು ಹನಿಯಾಗಿ ಪರಿವರ್ತನೆಗೊಳಿಸಲು ವೈಜ್ಞಾನಿಕವಾಗಿ ಪ್ರೇರೇಪಿಸುವ ತಂತ್ರಜ್ಞಾನವೇ ಮೊಡ ಬಿತ್ತನೆ.

2. ಮೋಡಬಿತ್ತನೆ ಮಳೆಯ ಪ್ರಮಾಣವನ್ನು ಹೆಚ್ಚಿಸುವ ಒಂದು ವಿಧಾನ.

3. ಮಳೆಗಾಲದಲ್ಲಿ ಮೋಡವಿದ್ದರೂ ಮಳೆ ಬಾರದೆ ಮೋಡ ಮುಂದೆ ಚಲಿಸಿ ಹೋಗುವ ಅನುಭವ ಕನರ್ಾಟಕದ ರೈತ ಬಾಂಧವರಿಗೆ ಪದೇ, ಪದೇ ಆಗುತ್ತಿರುವ ಬವಣೆ

4. ಮೋಡಗಳಲ್ಲಿ ಸಾಕಷ್ಟು ತೇವಾಂಶವಿದ್ದಾಗಲೂ ಮಳೆಬಾರದಿರುವಿಕೆ ಅತಿಸೂಕ್ಷ್ಮ ಕಣಗಳ ಅಭಾವವೇ ಕಾರಣವೆಂದು ಮೋಡ ಭೌತಶಾಸ್ತ್ರ (ಅಟಠಣಜ ಕಥಿಫಿ) ಹೇಳುತ್ತದೆ.

5. ಇಂಥ ಪರಿಸ್ಥಿತಿಯಲ್ಲಿ ಮೋಡ ಉಷ್ಣಾಂಶವನ್ನೇ ಗಮನಿಸಿ ಸಿಲ್ವರ್ ಐಯೋಡೈಡ್ ಅಥವಾ ಸೋಡಿಯಂ ಕ್ಲೋರೈಡ್ ಇವುಗಳನ್ನು ಸಣ್ಣ ಕಣಗಳಾಗಿ ಮೋಡದಲ್ಲಿ ಬಿತ್ತುವುದು. ಇದರಿಂದ ಮೋಡದಲ್ಲಿದ್ದ ತೇವಾಂಶ ಹನಿಯಾಗಿ ಪರಿವರ್ತನೆಗೊಂಡು ಮಳೆ ರೂಪದಲ್ಲಿ ಕೆಳಗೆ ಬರುತ್ತದೆ.

6. ಬರಗಾಲದ ತೀವ್ರತೆಯನ್ನು ಕಡಿಮೆ ಮಾಡುವ ಎಲ್ಲ ವಿಧಾನಗಳಲ್ಲಿ ಮೋಡದ ಬಿತ್ತನೆ ಅತಿ ಕಡಿಮೆ ವೆಚ್ಚದಿಂದ ಮಾಡುವ ವಿಧಾನ.

7. ಜಗತ್ತಿನಲ್ಲಿ ಸುಮಾರು 45 ದೇಶಗಳು ಮೋಡಬಿತ್ತನೆ ಸುಮಾರು 40 ವರ್ಷಗಳಿಂದ ಮಾಡುತ್ತಾ ಬಂದಿವೆ.

8. 2003ನೇ ಇಸವಿಯಲ್ಲಿ ಶ್ರೀ ಎಸ್.ಎಂ. ಕೃಷ್ಣ ಅವರ ಸಕರ್ಾರದ ಅವಧಿಯಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಶ್ರೀ ಎಚ್.ಕೆ. ಪಾಟೀಲರವರ ನೇತೃತ್ವದಲ್ಲಿ 83 ದಿವಸ ಯಶಸ್ವಿಯಾಗಿ ಮೋಡ ಬಿತ್ತನೆಯ ಕಾರ್ಯಕ್ರಮವನ್ನು 9 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೊಳ್ಳಲಾಗಿತ್ತು.

9. 2003ನೇ ಇಸವಿಯ ಮೋಡ ಬಿತ್ತನೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿರುವ ಬಗ್ಗೆ ತಾಂತ್ರಿಕ ಮತ್ತು ವೈಜ್ಞಾನಿಕ ವರದಿಗಳು ಜಲಸಂಪನ್ಮೂಲ ಇಲಾಖೆಯಲ್ಲಿ ಲಭ್ಯ ಇವೆ.

10. 2008ರ ಜುಲೈ 19, 20 ಮತ್ತು 21 ರಂದು ಗದಗ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಶ್ರೀ ಎಚ್.ಕೆ. ಪಾಟೀಲರು ಖಾಸಗಿಯಾಗಿ ಸ್ವಯಂ ಸೇವಾ ಸಂಸ್ಥೆಯಾದ ಹುಲಕೋಟಿಯ ಕೃಷಿ ವಿಜ್ಞಾನ ಕೇಂದ್ರದ ಮೂಲಕ ಮೋಡ ಬಿತ್ತನೆಯನ್ನು ಮಾಡಿಸಿದರು. ಈ ಕಾಯರ್ಾಚರಣೆಯ ಸಂದರ್ಭದಲ್ಲಿ ಮೋಡ ಬಿತ್ತನೆ ಕೈಗೊಂಡ ಪ್ರದೇಶದಲ್ಲಿ ಕನಿಷ್ಟ 20 ಮಿ.ಮೀ. ಮತ್ತು ಗರಿಷ್ಟ 45 ಮಿ.ಮೀ. ಮಳೆಯಾಗಿರುವ ವೈಜ್ಞಾನಿಕ ವರದಿಗಳು ಕನರ್ಾಟಕ ಸಕರ್ಾರದ ಬರಪರಿಹಾರದ ಕೋಶದಲ್ಲಿಯೇ ಲಭ್ಯವಿದೆ.

11. ಇದಾದನಂತರ ಕನರ್ಾಟಕದ ಅನುಭವದ ಆಧಾರದ ಮೇಲೆ ಮಹಾರಾಷ್ಟ್ರ ಹಾಗೂ ಆಂದ್ರ ಪ್ರದೇಶಗಳು ಮೋಡಬಿತ್ತನೆಯನ್ನು ಪ್ರಾರಂಭಿಸಿದವು.

12. ಆಂದ್ರ ಪ್ರದೇಶದಲ್ಲಿ ಮೋಡಬಿತ್ತನೆಯ ಕಾರ್ಯಕ್ರಮವನ್ನು ಕಳೆದ 10 ವರ್ಷಗಳಿಂದ ಸತತವಾಗಿ ಸಕರ್ಾರದ ವತಿಯಿಂದ ನಡೆಸಲಾಗುತ್ತಿದೆ.

13. ಮೋಡ ಬಿತ್ತನೆಯ ಪರಿಣಾಮವಾಗಿ ಆಂದ್ರ ಪ್ರದೇಶದ ಬರಪೀಡಿತ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿ ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಇದನ್ನೊಂದು ಕಾರ್ಯಕ್ರಮವನ್ನಾಗಿ ಜಾರಿಗೊಳಿಸಲಾಗುತ್ತಿದೆ.

14. ರಾಜ್ಯದಲ್ಲಿ ಬೀಳುವ ಮಳೆ ಮತ್ತು ಹಂಚಿಕೆಯು ತುಂಬಾ ಏರು ಪೇರು ಸ್ವರೂಪದ್ದಾಗಿದೆ. ಮಳೆಗಾಲದ ಸುಮಾರು 55 ದಿನಗಳಲ್ಲಿ ವರ್ಷದಲ್ಲಿ ಸಾಮಾನ್ಯವಾಗಿ 1138 ಮಿ.ಮೀ. ಮಳೆ ಆಗುತ್ತದೆ. ಮಳೆ ಆಗುವ ಪ್ರಮಾಣ ಒಂದು ಕಡೆಯಿಂದ ಮತ್ತೊಂದು ಕಡೆ ವ್ಯತ್ಯಾಸವಾಗಿದ್ದು, ಪೂರ್ವ ಭಾಗದಲ್ಲಿ 569 ಮಿ.ಮೀ. ಗಳಷ್ಟು ಕಡಿಮೆ ಮಳೆ ಬಿದ್ದರೆ, ಪಶ್ಚಿಮ ಭಾಗದಲ್ಲಿ 4029 ರಷ್ಟು ಅಧಿಕ ಪ್ರಮಾಣದ ಮಳೆ ಆಗುತ್ತದೆ. ರಾಜ್ಯದ ಸುಮಾರು 2/3 ರಷ್ಟು ಭೌಗೋಳಿಕ ಪ್ರದೇಶದಲ್ಲಿ 750 ಮಿ.ಮೀ. ಗಿಂತ ಕಡಿಮೆ ಮಳೆ ಬೀಳುತ್ತದೆ. ರಾಜ್ಯದಲ್ಲಿ ಮಳೆ ಸುನಿಶ್ಚಿತವಾದ ಪ್ರದೇಶಗಳಲ್ಲೂ ಸಹ ಕೆಲವು ವರ್ಷಗಳಿಂದ ಮಳೆಯ ತೀವ್ರ ಅಭಾವ ಎದುರಾಗುತ್ತದೆ.

15. ಕಾಲಕಾಲಕ್ಕೆ ಹವಾಮಾನದ ನಿಖರ ಮಾಹಿತಿಯನ್ನು ಪಡೆಯಲು ರಾಜ್ಯದ ಪ್ರಮುಖ 3 ಸ್ಥಳಗಳಲ್ಲಿ ಅಂದರೆ 1. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ 2. ಶೊರಾಪುರ (ಸುರಪುರ ಯಾದಗಿರಿ ಜಿಲ್ಲೆ) 3. ಗದಗ ನಲ್ಲಿ ರಡಾರ್ಗಳನ್ನು ಸ್ಥಾಪಿಸುವ

ಮೂಲಕ ಮೋಡಗಳ ಅಧ್ಯಯನ ಮಾಡಲು ವೈಜ್ಞಾನಿಕ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಮೋಡ ಬಿತ್ತನೆ ಜಾರಿಗೊಳಿಸಲಾಗುವುದು. ರಾಡಾರ್ಗಳ ಸ್ಥಾಪನೆಯ ಕಾರ್ಯ ಪ್ರಾರಂಭವಾಗಿದ್ದು ಇನ್ನು 2-3 ದಿನಗಳಲ್ಲಿ ಈ ರಾಡಾರ್ಗಳ ಕಾಯರ್ಾಚರಣೆ ಪ್ರಾರಂಭವಾಗಲಿದೆ.

55/55

## ನೇಮಕ

<u>ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)</u>

ನಿಲಯ ಮಿತಾಶ್, ಐ.ಎ.ಎಸ್. ಅವರನ್ನು ರೆಸಿಡೆಂಟ್ ಕಮೀಷನರ್, ಕರ್ನಾಟಕ ಭವನ, ನವದೆಹಲಿ ಹುದ್ದೆಗೆ ನೇಮಿಸಲಾಗಿದೆ.

**56/56**

## ಸಚಿವರ ಪ್ರವಾಸ

<u>ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)</u>

ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಂ ಅವರು ಆಗಸ್ಟ್ 20 ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

**57/57**

## ನೇಮಕ

<u>ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)</u>

ಅತುಲ್ ಕುಮಾರ್ ತಿವಾರಿ, ಐ.ಎ.ಎಸ್. ಅವರನ್ನು ಜಂಟಿ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಇಲಾಖೆ, ಕೇಂದ್ರ ಸರ್ಕಾರ, ನವದೆಹಲಿ ಹುದ್ದೆಗೆ ನೇಮಿಸಲಾಗಿದೆ.

**58/58**

## ಸಂದೇಶ

<u>ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)</u>

ಕರ್ನಾಟಕ ರಾಜ್ಯಪಾಲ ಶ್ರೀ ವಜುಭಾಯಿ ವಾಲಾ ಅವರು ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಕರ್ನಾಟಕದ ಜನತೆಗೆ ಶುಭಾಶಯ ಕೋರಿದ್ದಾರೆ. ಭಾರತದ ಸಾರ್ವಭೌಮತ್ವ,

ಏಕತೆಯನ್ನು ಎತ್ತಿ ಹಿಡಿದು ಶಾಂತಿ, ಅಭಿವೃದ್ಧಿ ಹಾಗೂ ಸಮೃದ್ಧಿಗಾಗಿ ಶ್ರಮಿಸೋಣ ಎಂದು ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**59/59**

# ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

**ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 24–8–2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿನ ಸಹಾಯಕ ಅಭಿಯಂತರರು (ಸಿವಿಲ್ ) 10+2 (ಹೈ.ಕ.) ಹುದ್ದೆಗಳು, ಕರ್ನಾಟಕ ಗೃಹ ಮಂಡಳಿಯಲ್ಲಿನ ಸಹಾಯಕ ಅಭಿಯಂತರರು (ಸಿವಿಲ್) –01 (ಹೈ.ಕ) ಹುದ್ದೆ, ಕೃಷಿ ಮಾರಾಟ ಇಲಾಖೆಯಲ್ಲಿನ ಸಹಾಯಕ ಅಭಿಯಂತರರು (ಸಿವಿಲ್) 04 (ಹೈ.ಕ) ಹುದ್ದೆಗಳು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಸಂರಕ್ಷಣಾಧಿಕಾರಿ 06+01 (ಹೈ.ಕ) ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗಳನ್ನು ದಿನಾಂಕ 11–8–2017 ರಂದು ಆಯೋಗದ ಅಂತರ್ಜಾಲದಲ್ಲಿ "http://kpsc.kar.nic.in/Selection List" ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ದಿನಾಂಕ 17–8–2017 ರೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು –560 001 ಇವರಿಗೆ ಸಲ್ಲಿಸಬಹುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

**60/60**

# ಪ್ರವಾಸ ಕಾರ್ಯಕ್ರಮ

**ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)**

ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಅವರು ಆಗಸ್ಟ್ 15 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

# ವಿಧಾನ ಪರಿಷತ್ತಿಗೆ ಚುನಾವಣೆ

ಬೆಂಗಳೂರು ಆಗಸ್ಟ್ 14 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಸದಸ್ಯರಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದ ಶ್ರೀಮತಿ ವಿಮಲಗೌಡ ಅವರ ನಿಧನರಾಗಿರುವ ಸ್ಥಾನವನ್ನು ತುಂಬಲು ಉಪ ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದೆ.

ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ 21 ಆಗಿದ್ದು 22ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಆಗಸ್ಟ್ 24, ಮತದಾನದ ದಿನಾಂಕ(ಅವಶ್ಯವಿದ್ದಲ್ಲಿ) ಆಗಸ್ಟ್ 31, ಮತದಾನದ ಸಮಯ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ ಮತಗಳ ಎಣಿಕೆ ಆಗಸ್ಟ್ 31 ರಂದು ಸಂಜೆ 5.00 ಗಂಟೆಯಿಂದ (ಮತದಾನದ ನಂತರ) ಚುನಾವಣೆ ಮುಕ್ತಾಯವಾಗುವ ದಿನಾಂಕ ಸೆಪ್ಟೆಂಬರ್ 4, 2017 ಎಂದು ಅಧಿಸೂಚನೆಯಲ್ಲಿ ತಿಳಿಸಿದಲಾಗಿದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯದರ್ಶಿ(ಪ್ರಭಾರ) ಎಸ್. ಮೂರ್ತಿ ಅವರು ಚುನಾವಣಾಧಿಕಾರಿ ಹಾಗೂ ಉಪ ಕಾರ್ಯದರ್ಶಿ ಎಂ.ಎಸ್. ಕುಮಾರಸ್ವಾಮಿ ಅವರು ಸಹಾಯಕ ಚುನಾವಣಾಧಿಕಾರಿಯಾಗಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.